("ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಡಿ. ಮಂಜುನಾಥ್ (ಅರಣ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1999ರ ಕರ್ನಾಟಕ ಅರಣ್ಯ ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1999ರ ಕರ್ನಾಟಕ ಅರಣ್ಯ ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಶಾಸನಾತ್ಮಕ ನಿರ್ಣಯ

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ವಿವಿಧ ಹಣಕಾಸು ಸಂಸ್ಥೆಗಳಿಂದ ಸಾಲದ ರೂಪದಲ್ಲಿ ಪಡೆಯುವ ಮೊತ್ತವನ್ನು ಹೆಚ್ಚು ಮಾಡುವ ಬಗ್ಗೆ.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ ನಾನು ಈ ಕೆಳಕಂಡ ನಿರ್ಣಯವನ್ನು ತಮ್ಮ ಅನುಮತಿ ಕೋರಿ ಸಭೆಯ ಮುಂದೆ ಮಂಡಿಸುತ್ತೇನೆ.

``1948ನೇ ಸಾಲಿನ ವಿದ್ಯುಚ್ಛಕ್ತಿ ಅಧಿನಿಯಮದ 65ನೇ ಪ್ರಕರಣದ (3)ನೇ ಉಪ ಪ್ರಕರಣದ ಮೇರೆಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ವಿವಿಧ ಹಣಕಾಸು ಸಂಸ್ಥೆಗಳಿಂದ ಸಾಲದ ರೂಪದಲ್ಲಿ ಪಡೆಯಲೆಂದು ನಿಗದಿಗೊಳಿಸಿರುವ ಮೊತ್ತ 1750 ಕೋಟಿಯಿಂದ 2100 ಕೋಟಿ ರೂಪಾಯಿಗಳಿಗೆ ಹೆಚ್ಚು ಮಾಡಬೇಕೆಂದು ಈ ಸದನವು ನಿರ್ಣಯಿಸುತ್ತದೆ".

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

``1948ನೇ ಸಾಲಿನ ವಿದ್ಯುಚ್ಛಕ್ತಿ ಅಧಿನಿಯಮದ 65ನೇ ಪ್ರಕರಣದ (3)ನೇ ಉಪ ಪ್ರಕರಣ ಮೇರೆಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ವಿವಿಧ ಹಣಕಾಸು ಸಂಸ್ಥೆಗಳಿಂದ ಸಾಲದ ರೂಪದಲ್ಲಿ ಪಡೆಯಲೆಂದು ನಿಗಧಿಗೊಳಿಸಿರುವ ಮೊತ್ತ 1750 ಕೋಟಿಯಿಂದ 2100 ಕೋಟಿ ರೂಪಾಯಿಗಳಿಗೆ ಹೆಚ್ಚು ಮಾಡಬೇಕೆಂದು ಈ ಸದನವು ನಿರ್ಣಯಿಸುತ್ತದೆ".

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು : ತಾವು ಇದರ ಮೇಲೆ ಮಾತನಾಡುತ್ತೀರಾ? You can avail this opportunity and give your views.

+ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಹೋದ ಸಲವೂ ನಾವು ಒಂದು ರೆಸಲ್ಯೂಷನ್ ಪಾಸ್ ಮಾಡಿ ಕೆ.ಇ.ಬಿ. ಗೆ ಹೆಚ್ಚಿನ ಹಣ ಕೊಡತಕ್ಕಂಥಾದ್ದನ್ನು ಮಾಡಿದ್ದೇವೆ. ಈ ಸಲವೂ ಕೂಡ ಪುನಃ 1750 ಕೋಟಿ ರೂಪಾಯಿಗಳಿಂದ 2,100 ಕೋಟಿ ರೂಪಾಯಿಗಳಿಗೆ ಅಂದರೆ ಇನ್ನೂ ಸುಮಾರು350ಕೋಟಿ ರೂಪಾಯಿಗಳ ಸಾಲವನ್ನು ತೆಗೆದುಕೊಳ್ಳಲು ಅವರಿಗೆ ನಾವು ಅಧಿಕಾರವನ್ನು ಕೊಡುತ್ತಿದ್ದೇವೆ. ವಿದ್ಯುಚ್ಛಕ್ತಿಯನ್ನು ಹೆಚ್ಚಿಗೆ ಉತ್ಪಾದನೆ ಮಾಡತಕ್ಕಂಥ ಕೆಲಸವನ್ನು ನಾವು ಮಾಡಬೇಕು. ಆದರೆ ಇದರ ಉಪಯೋಗ ಹೇಗೆ ಆಗುತ್ತದೆ ಎನ್ನುವುದನ್ನು ನೋಡುವುದೂ ಅತ್ಯಾವಶ್ಯಕವಾಗಿದೆ. ಏಕೆಂದರೆ, ಈ ಹೊಸ ಕಾನೂನಿನ ಪ್ರಕಾರ ನಾವು ಕರ್ನಾಟಕ ಎಲೆಕ್ಟ್ರಿಸಿಟಿ ರಿಫಾರ್ಮ್ಸ್ ಆರ್ಡಿನೆನ್ಸ್,1999ನ್ನು ಇಷ್ಯೂ ಮಾಡಿದ್ದೇವೆ. ಕೆ.ಇ.ಬಿ.ಯನ್ನು ಪ್ರೈವಟೈಸೇಷನ್ ಮಾಡಲೂ ಕೂಡ ಸಾಕಷ್ಟು ಅವಕಾಶ ಇದರಲ್ಲಿ ಮಾಡಿಕೊಟ್ಟಿದ್ದೀರಿ. Chapter-7, requirement of licence, grant of licence by the Commission. ಲೈಸೆನ್ಸನ್ನು ಇಷ್ಯೂ ಮಾಡತಕ್ಕಂಥ ಅಥಾರಿಟಿಯನ್ನು ತಾವು ಸಂಪೂರ್ಣವಾಗಿ ಈ ಒಂದು ರೆಗ್ಯುಲೇಟರಿ ಕಮೀಷನ್ನಿಗೆ ಕೊಟ್ಟಿದ್ದೀರಿ. ಈ ರೆಗ್ಯುಲೇಟರಿ ಕಮೀಷನ್ನಿನ ಮುಂದೆ ಒಂದು ಬೋರ್ಡ್ ಇರುತ್ತದೆ. ಅಂದರೆ ಕೆಲವು ಸದಸ್ಯರನ್ನೊಳಗೊಂಡ ಒಂದು ಕಮಿಟಿ ಅಥವಾ ಒಂದು ಬೋರ್ಡ್ ಇರುತ್ತದೆ. ಆ ಬೋರ್ಡ್‌ನವರು ಈ ಲೈಸೆನ್ಸನ್ನು ಕೊಡತಕ್ಕಂಥಾದ್ದನ್ನು ಮಾಡುತ್ತಾರೆ ಮತ್ತು ಅದು ವಿಶೇಷವಾಗಿ transmit electricity in a specified area of trasmission, supply electricity in a specified area of supply and supply in the bulk to the licensed or any person. ಹೀಗೆ ಕೆಲವು ವ್ಯಕ್ತಿಗಳಿಗೆ ಅಥವಾ ಸಂಸ್ಥೆಗಳಿಗೆ ಅಥವಾ ಕಂಪನಿಗಳಿಗೆ ತಾವು ಲೈಸೆನ್ಸನ್ನು ಕೊಟ್ಟು ಅದರ ಮುಖಾಂತರ ಎಲೆಕ್ಟ್ರಿಸಿಟಿ ಸಪ್ಲೈ ಮಾಡತಕ್ಕಂಥ ಕೆಲಸ, ಡಿಸ್ಟ್ರಿಬ್ಯೂಷನ್ ಮಾಡತಕ್ಕಂಥ ಕೆಲಸವನ್ನು ವಹಿಸಿಕೊಡುತ್ತೀರಿ. ಟ್ಯಾರಿಫ್ ರಿವಿಷನ್ ಮಾಡತಕ್ಕಂಥಾದ್ದರಲ್ಲಿ ತಾವು ಈ ಕಮಿಟಿಯನ್ನು ಇಟ್ಟುಕೊಂಡರೂ ಕೂಡ, ನಾಳೆ ಪ್ರೈವಟೈಸೇಷನ್ ಆದಮೇಲೆ ಬರತಕ್ಕಂಥ ತೊಂದರೆಗಳನ್ನು ನಾನು ಹೇಳುತ್ತೇನೆ. ಕೆಲವು ಅಬ್ಲಿಗೇಷನ್‌ಗಳು ಸರ್ಕಾರದ ಮೇಲೆ ಇರುತ್ತವೆ. ಉದಾಹರಣೆಗೆ 'ಭಾಗ್ಯಜ್ಯೋತಿ' ಯೋಜನೆ. ಇದು ಸರ್ಕಾರ ಮಾಡತಕ್ಕಂಥ ಒಂದು ಕಲ್ಯಾಣಕಾರಿ ಕೆಲಸ. ನೀವು ಪ್ರೈವೇಟ್‌ನವರಿಗಾಗಲೀ, ಬೋರ್ಡ್‌ನವರಿಗಾಗಲೀ, ರೆಗ್ಯುಲೇಟರಿ ಕಮೀಷನ್ನಿನವರಿಗಾಗಲೀ ಇಂಥ ಯೋಜನೆಗಳಿಗಾಗಿ ನಮಗೆ ಸಬ್ಸಿಡೈಸ್ಡ್ ಮಾಡಿಕೊಡಿ ಎಂದರೆ ಅನೇಕ ಸಾರಿ ಅವರು ಇಂಥ ಯೋಜನೆಗಳಿಗೆ ಒಪ್ಪುವುದಿಲ್ಲ. ಏಕೆಂದರೆ ಕಮರ್ಷಿಯಲ್ ಆಗಿರತಕ್ಕಂಥ ಸಂಸ್ಥೆಗಳು ಲಾಭ ಮತ್ತು ನಷ್ಟವನ್ನು ನೋಡುತ್ತೇವೆಯೇ ಹೊರತು ಬೇರೆ ರೀತಿಯಿಂದ ಅವರು ನೋಡುವುದಿಲ್ಲ. ರೈತರಿಗೆ ನೀವು ಕನ್ಸೆಷನ್ ಕೊಡಬೇಕು ಎನ್ನುವುದು ಇದೆ. ನಾವು ಇವತ್ತು ಒಂದು ಹೆಚ್.ಪಿ.ಗೆ 300 ರೂಪಾಯಿಗಳನ್ನು ಮಾಡಿದ್ದೇವೆ. ನಾಳೆ, ಪ್ರೈವೇಟ್‌ನವರು ಇದನ್ನು ವಹಿಸಿಕೊಂಡ ಮೇಲೆ, ಸಹಜವಾಗಿ ಅವರು ನಮ್ಮ ಪ್ರಪೋಸಲ್‌ಗಳಿಗಾಗಲೀ ಅಥವಾ ನಮ್ಮ

ಅನಿಸಿಕೆಗಳಿಗಾಗಲೀ ಮನ್ನಣೆ ಕೊಡುವುದಿಲ್ಲ. ನೀವು ಏನು ಕನ್‌ಸ್ಯೂಮ್ ಮಾಡುತ್ತೀರಿ, ಅದಕ್ಕೆ ಇಷ್ಟು ಹಣ ಕೊಟ್ಟಾಗ ಮಾತ್ರ ನಾವು ಅದನ್ನು ಒಪ್ಪಿಕೊಳ್ಳಬಹುದು, ಇಲ್ಲದಿದ್ದರೆ ಇಲ್ಲ ಎಂದು ಅವರು ನಾಳೆ ದಿವಸ ಹೇಳುತ್ತಾರೆ. ಅವರದೇ ಆದಂಥ ಕೆಲವು ಒತ್ತಡಗಳು ಇಂಥ ಕಂಪನಿಗಳಲ್ಲಿ ಇರುತ್ತದೆ. ಅವರಿಗೆ ಸಾಮಾನ್ಯ ಜನರಿಗೆ ಉಪಕಾರ ಮಾಡಬೇಕು, ಸಹಾಯ ಮಾಡಬೇಕು ಎನ್ನುವ ಅಬ್ಲಿಗೇಷನ್ ಇರುವುದಿಲ್ಲ. ಯಾವಾಗ ಅಬ್ಲಿಗೇಷನ್ ಇರುವುದಿಲ್ಲ, ಆಗ ನಾವು ಇಂಥ ಸಂಸ್ಥೆಗಳನ್ನು ಪ್ರೈವಟೈಸೇಷನ್ ಮಾಡಿ ಲಾಭವಿಲ್ಲ. ನಾವು ಕೇವಲ ಲಾಭದ ದೃಷ್ಟಿಯಿಂದಲೇ ನೋಡಿದರೆ, ಸಮಾಜಕ್ಕೆ ಸಲ್ಲಿಸತಕ್ಕಂಥ ಸೇವೆ ಸಲ್ಲಿಸಲು ಆಗುವುದಿಲ್ಲ. ಉದಾಹರಣೆಗೆ, ಹಾಸ್ಪಿಟಲ್‌ಗಳು, ಎಜುಕೇಷನ್ ಇನ್ಸ್‌ಟಿಟ್ಯೂಷನ್‌ಗಳು, ಎಲೆಕ್ಟ್ರಿಸಿಟಿ ಸಂಸ್ಥೆ ಇವು ನೇರವಾಗಿ ಸಾಮಾನ್ಯ ಜನರಿಗೆ ಸಹಾಯ ಮಾಡತಕ್ಕಂಥ ಸಂಸ್ಥೆಗಳು. ಇಂಥ ಸಮಸ್ಯೆಗಳನ್ನು ನೀವು ಸಂಪೂರ್ಣವಾಗಿ ಪ್ರೈವೇಟ್‌ನವರ ಕೈಯ್ಯಲ್ಲಿ ಕೊಟ್ಟಾಗ ಖಂಡಿತವಾಗಿ ಅದರಿಂದ ಸಾಮಾನ್ಯ ಜನರಿಗಾಗಲೀ, ರೈತರಿಗಾಗಲೀ ಉಪಕಾರ ಆಗುವುದಿಲ್ಲ. ಆದ್ದರಿಂದ ಇದನ್ನು ಸುಧಾರಣೆ ಮಾಡುವ ದೃಷ್ಟಿಯಿಂದ ನಾವು ನೋಡಬೇಕು. ಕೇಂದ್ರ ಸರ್ಕಾರದವರು ಒಂದು ಪಾಲಿಸಿಯನ್ನು ಮಾಡಿದ್ದಾರೆ, ಆ ಪಾಲಿಸಿಯನ್ನು ತಮಿಳುನಾಡು, ಒರಿಸ್ಸಾ, ಪಶ್ಚಿಮ ಬಂಗಾಳದವರು ಇಂಪ್ಲಿಮೆಂಟ್ ಮಾಡಿದ್ದಾರೆ. ಅದಕ್ಕಾಗಿ ನಾವೂ ಕೂಡ ಮೈನ್ ಸ್ಟ್ರೀಮ್‌ನಲ್ಲೇ ಹೋಗುತ್ತಿದ್ದೇವೆ. ಅದಕ್ಕಾಗಿ ನೀವು ಒಪ್ಪಿಗೆ ಕೊಡಿ ಎನ್ನತಕ್ಕಂಥ ಮಾತನ್ನು ಈ ವಾದವನ್ನು ತಾವು ಆ ಮನೆಯಲ್ಲೂ ಕೂಡ ಇಟ್ಟಿದ್ದೀರಿ. ಅದರ ಜೊತೆಯಲ್ಲಿ ನಮ್ಮ ಅಬ್ಲಿಗೇಷನ್ಸ್ ಇದೆ ಎನ್ನುವುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಸಮಾಜಕ್ಕೆ, ರೈತರಿಗೆ ಮತ್ತು ಬಡವರಿಗೆ ನಾವು ಕೆಲವು ಸಹಾಯವನ್ನು ಮಾಡುವುದು ನಮ್ಮ ಕರ್ತವ್ಯ ಕೂಡ ಆಗಿದೆ. ಬೇರೆ ರಾಜ್ಯದವರು ಮಾಡದೇ ಇರಬಹುದು. ಆದರೆ ನಮ್ಮ ರಾಜ್ಯದಲ್ಲಿ ಕೆಲವು ಕಲ್ಯಾಣಕಾರಿ ಸ್ಕೀಂಗಳು ಸುಮಾರು 50ವರ್ಷಗಳಿಂದ ನಡೆದುಕೊಂಡು ಬಂದಿವೆ. ಮತ್ತು ಎಲ್ಲಾ ಸರ್ಕಾರಗಳು ಕೆಲವು ಸ್ಕೀಂಗಳನ್ನು ಮುಂದುವರೆಸಿಕೊಂಡು ಬಂದಿವೆ. ಆದ್ದರಿಂದ ನಮ್ಮ ರಾಜ್ಯದಲ್ಲಿ ಕೆಲವು ಕಲ್ಯಾಣಕಾರಿ ಮೆಜರ್ಸ್‌ನಲ್ಲಿ ಕೆ.ಇ.ಬಿ.ಯನ್ನು ಪ್ರೈವಟೈಸ್ ಮಾಡುವುದನ್ನು ನೋಡಬೇಕಾಗುತ್ತದೆ. ಇವತ್ತು ಕೆ.ಇ.ಬಿ. ಯನ್ನು ಸಂಪೂರ್ಣವಾಗಿ ಕೆಲವೇ ಜನರ ಕೈಯಲ್ಲಿ ಕೊಟ್ಟರೆ ಖಂಡಿತವಾಗಿ ಇದರ ದುರುಪಯೋಗವಾಗುತ್ತದೆ. ಇದಲ್ಲದೆ ಖಾಸಗಿಯವರು ಮನಸ್ಸಿಗೆ ಬಂದಂತೆ, ದರಗಳನ್ನು ಫಿಕ್ಸ್ ಮಾಡುತ್ತಾರೆ ಮತ್ತ ಟ್ಯಾರಿಫ್‌ನ್ನು ಹಾಕುತ್ತಾರೆ. ಸರ್ಕಾರ ಎಲ್ಲೆಲ್ಲಿ ಬಡವರಿಗೆ ಸಹಾಯ ಮಾಡಬೇಕೆಂದು ಇತ್ತೋ ಅದನ್ನು ಮಾಡುವುದಕ್ಕಾಗುವುದಿಲ್ಲ ಎಂದು ಹೇಳಬೇಕಾಗುತ್ತದೆ. ನಾವು ಏನು 350 ಕೋಟಿ ರೂಪಾಯಿಗಳ ಸಾಲವನ್ನು ಕೆ.ಇ.ಬಿ.ಗೆ ಕೊಡುತ್ತಾ ಇದ್ದೇವೆ ಅಥವಾ ಅವರಿಗೆ ಈ ಲೋನ್ ರೈಸ್ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುತ್ತಿದ್ದೇನೆ. ನ್ಯಾಚುರಲಿ ಲೋನ್ ರೈಸ್ ಮಾಡಿಕೊಳ್ಳುವುದಕ್ಕೆ ಅವಕಾಶ ಕೊಟ್ಟರೆ ಕೆ.ಇ.ಬಿ.ಯವರು ಎಷ್ಟೇ ತೊಂದರೆಯಲ್ಲಿ ಇದ್ದರೂ ಕೊನೆಗೆ ಖಂಡಿತವಾಗಿ ನಾವು ಎಲ್ಲಿಂದಲಾದರೂ ತಂದು ಅವರಿಗೆ ಹಣ ಕೊಡಬೇಕಾಗುತ್ತದೆ ಹೊರತಾಗಿ ಅದನ್ನು ಮುಂದುವರೆಸಿಕೊಂಡು ನಾವು ಹೋಗುವುದಕ್ಕೆ ಆಗುವುದಿಲ್ಲ. ಅದು ಸಬ್ಸಿಡಿ ರೂಪದಲ್ಲಿ ಇದ್ದರೂ ಸಹ ಮುಂದೆ ಬಜೆಟರಿ ಪ್ರಾವಿಷನ್ ಮಾಡಿ ಆದರೂ ಅವರಿಗೆ ಕೊಡಬೇಕಾಗುತ್ತದೆ. ಆದ್ದರಿಂದ ಬಡವರ ಬಗ್ಗೆ, ರೈತರ ಬಗ್ಗೆ, ಭಾಗ್ಯಜ್ಯೋತಿಯಂಥ ಸ್ಕೀಮ್ಸ್ ಬಗ್ಗೆ ಯಾವ ರೀತಿಯಾಗಿ ಇದರ ಧೋರಣೆ ಇರುತ್ತದೆ, ಮತ್ತು

ಪ್ರೈವೇಟೈಸೇಷನ್ ಆದಮೇಲೆ ಅವರ ನಡವಳಿಕೆಯಲ್ಲಿ ವ್ಯತ್ಯಾಸವಾದಾಗ ಸರ್ಕಾರದ ಹತೋಟಿ ಇದರ ಮೇಲೆ ಏನಿರುತ್ತದೆ ಎಂಬುದನ್ನೆಲ್ಲ ಸರ್ಕಾರದ ಕಡೆಯಿಂದ ಸದನಕ್ಕೆ ತಿಳಿಸಬೇಕಾಗುತ್ತದೆ. ಆದ್ದರಿಂದ ದಯವಿಟ್ಟು ಇದನ್ನೆಲ್ಲಾ ಕ್ಲಾರಿಫೈ ಮಾಡಿದರೆ ಒಳ್ಳೆಯದೆಂದು ನಾನು ಭಾವಿಸುತ್ತೇನೆ.

+ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ವ್ಯಕ್ತಪಡಿಸಿರತಕ್ಕಂಥ ಸಂಶಯಗಳು ಏನಿವೆ ಅವುಗಳಿಗೆ ಆಧಾರ ಇದೆ. ಇಲ್ಲವೆಂದು ನಾನು ಹೇಳುತ್ತಿಲ್ಲ. ಈಗ ಪವರ್ ಜನರೇಷನ್, ಟ್ರಾನ್ಸ್‌ಮಿಷನ್ ಅಂಡ್ ಡಿಸ್ಟ್ರಿಬ್ಯೂಷನ್ಸ್, ಇವುಗಳ ಟ್ಯಾರಿಫ್ ಇರಬಹುದು ಅಥವಾ ವಿದ್ಯುಚ್ಛಕ್ತಿ ಎನ್ನುವುದೇ ಒಂದು ಇಂಡಸ್ಟ್ರಿ, ಆ ಇಂಡಸ್ಟ್ರಿಗೆ ಸಂಬಂಧಪಟ್ಟಿರತಕ್ಕಂಥ ಎಲ್ಲಾ ವಿಷಯಗಳನ್ನು ನೋಡಿಕೊಳ್ಳುವುದಕ್ಕೆ ಒಂದು ಕಮಿಷನ್ ಇದೆ, ಆಕ್ಚುಯಲಿ ಆ ಕಮೀಷನ್ ಆಕ್ಟನ್ನು ಪಾಸ್ ಮಾಡಿ ಕೊಟ್ಟಿದ್ದೀರಿ. ಈಗ ಕೆ.ಇ.ಬಿ.ಯನ್ನು ಖಾಸಗೀಕರಣ ಮಾಡುತ್ತೇವೆ ಎನ್ನುವ ನಿಮ್ಮ ಒಂದು ನ್ಯಾಚುರಲ್ ಡೌಟ್ಸ್ ಏನಿದೆ ಅದು ಬೇಡ. ಖಾಸಗೀಕರಣ ಮಾಡುತ್ತಿಲ್ಲ. ಆದರೆ ನಾವು ಕೆ.ಇ.ಬಿ.ಯನ್ನು ಖಾಸಗೀಕರಣ ಮಾಡುವುದಕ್ಕೆ ಅವಕಾಶ ಇದೆ. Totally we need about Rs.405 crores in another two to three years. ನಾವು ಎಲೆಕ್ಟ್ರಿಸಿಟಿ ಜನರೇಟ್ ಮಾಡಿ ಅದನ್ನು ಸರಿಯಾಗಿ ಟ್ರಾನ್ಸ್‌ಮಿಟ್ ಮಾಡದೇ ಇದ್ದರೆ distribution, power theft, break-down voltage drop, ಇವೆಲ್ಲಾ ಸಮಸ್ಯೆಗಳು ಈಗಲೂ ಇವೆ. ಖಾಸಗೀಕರಣ ಮಾಡಬೇಕೆಂದಿದ್ದರೆ ನಾವು ಈಗಲೂ ಮಾಡಬಹುದು. ವೆಸ್ಟ್‌ಬೆಂಗಾಲ್‌ನಲ್ಲಿ ವಿದ್ಯುಚ್ಛಕ್ತಿ ಮಂಡಳಿಯನ್ನು ಖಾಸಗೀಕರಣಗೊಳಿಸಿದ್ದಾರೆ. Goenka has taken over for distribution in Calcutta city. ಅವರು ಇಲ್ಲಿಗೆ ಬಂದಿದ್ದರು. ಆದರೆ ನಾವು ಆ ಖಾಸಗೀಕರಣ ಮಾಡುವುದಕ್ಕೆ ಒಪ್ಪಿಲ್ಲ. ಕೆ.ಇ.ಬಿ.ಯನ್ನು ಪವರ್ ಟ್ರಾನ್ಸ್‌ಮಿಷನ್ ಕಾರ್ಪೊರೇಷನ್ ಎಂದು ಏಕೆ ಮಾಡುತ್ತೇವೆಂದರೆ ಈ ರೀತಿಯ ಸಾಲ ಪಡೆಯುವುದಕ್ಕೆ. ನಮ್ಮ ಕರ್ನಾಟಕ ಪವರ್ ಕಾರ್ಪೊರೇಷನ್ ಇದೆ. ಅದರ ಜವಾಬ್ದಾರಿ ಪವರ್ ಜನರೇಷನ್ ಮಾತ್ರ. ಕೆ.ಇ.ಬಿ.ಯಲ್ಲಿ ಅವರದ್ದು ಇದ್ದದ್ದು ಟ್ರಾನ್ಸ್‌ಮಿಷನ್ ಮತ್ತು ಡಿಸ್ಟ್ರಿಬ್ಯೂಷನ್. ಪವರ್ ಡಿಸ್ಟ್ರಿಬ್ಯೂಷನ್ ಬಗ್ಗೆ ಗ್ರಾಹಕರಿಂದ, ಇಂಡಸ್ಟ್ರಿಗಳಿಂದ, ಪಂಪುಸೆಟ್ಟುಗಳನ್ನು ಉಪಯೋಗಿಸತಕ್ಕಂಥ ಕೃಷಿಕರಿಂದ ಬಹಳಷ್ಟು ದೂರುಗಳು ಇದ್ದವು. ಆ ಎಲ್ಲಾ ದೂರುಗಳನ್ನು ಕೇಳಿ ಸಮಾಧಾನಕರವಾದಂಥ ಒಂದು ತೀರ್ಮಾನ ಮಾಡತಕ್ಕಂಥ ಯಂತ್ರ ಇರಲಿಲ್ಲ. ಪ್ರತಿಯೊಂದಕ್ಕೂ ಸರ್ಕಾರಕ್ಕೆ, ಸಂಬಂಧಪಟ್ಟ ಮಂತ್ರಿಗೆ ದೂರುಗಳು ಬರುತ್ತಿದ್ದವು. ಅದಕ್ಕೋಸ್ಕರ ಇಂಥ ಒಂದು ಅಟಾನಮಸ್ ಆ ಅಟಾನಮಿ ಎಷ್ಟು ಎಂದರೆ government can direct them. ಈಗ ಗಂಗಾಕಲ್ಯಾಣ ಯೋಜನೆ ಇದೆ, ಭಾಗ್ಯಜ್ಯೋತಿ ಯೋಜನೆ ಇದೆ ಕೆಲವು ವೈದ್ಯಕೀಯ ಸವಲತ್ತುಗಳನ್ನು ಕೊಡುವಾಗ ಅದಕ್ಕೋಸ್ಕರ ನಾವು ಎಲೆಕ್ಟ್ರಿಸಿಟಿ ಫ್ರೀ ಕೊಡಬೇಕಾಗುತ್ತದೆ. ಎಜುಕೇಷನ್‌ಗೆ ಸಂಬಂಧಪಟ್ಟ ಹಾಗೆ ಕೆಲವಕ್ಕೆ ಪವರ್ ಫ್ರೀ ಕೊಡಬೇಕಾಗುತ್ತದೆ. ಈ ಡೈರೆಕ್ಷನ್ಸನ್ನು ಕಮೀಷನ್ ಮಾನ್ಯ ಮಾಡಬೇಕು. ಮಾನ್ಯ ಮಾಡದೇ ಇದ್ದರೆ we can subsidise those sections and ask the people to maintain it.ಅದಕ್ಕೆಲ್ಲ ಪ್ರಾವಿಷನ್ ಇದೆ. ಇಂಥ ಒಂದು ಕಮೀಷನ್ ಅಥವಾ ಪವರ್ ಟ್ರಾನ್ಸ್‌ಮಿಷನ್ ಕಾರ್ಪೊರೇಷನ್‌ಗೆ ಸಾಲ ತೆಗೆದುಕೊಳ್ಳುವುದಕ್ಕೆ 3 ತಿಂಗಳ ಹಿಂದೆ ವಿಶ್ವಬ್ಯಾಂಕಿನವರು ಬಂದಿದ್ದಾಗ ಅವರ ಜೊತೆ ಮಾತುಕತೆ ಆಡಿದೆವು. ಐ.ಎಂ.ಎಫ್.ನವರು

ಕೂಡ ಬಂದಿದ್ದರು. ಅವರು ಏನು ಹೇಳುತ್ತಾರೆಂದರೆ - "ನೀವು ಈ ತರಹ ರೆಗ್ಯುಲೇಟರಿ ಕಮೀಷನ್ ಇಲ್ಲದೆ ಯದ್ವಾತದ್ವಾ ಎಲೆಕ್ಟ್ರಿಸಿಟಿ ಇಂಡಸ್ಟ್ರಿಯನ್ನು ನಡೆಸುತ್ತೀರಿ ಎಂದರೆ ನಾವು ಸಾಲ ಕೊಡುವುದಿಲ್ಲ. ಇಂಥ ಒಂದು ಕಮೀಷನ್ ಅನ್ನು ತಾವು ಫಾರಂ ಮಾಡಬೇಕೆಂದು ಒಂದು ಕಂಡೀಷನ್ ಹಾಕಿದರು. ಈಗಾಗಲೇ 13 ರಾಜ್ಯಗಳಲ್ಲಿ ಅವರದೇ ಆದಂಥ ರೀತಿಯಲ್ಲಿ ಕಮೀಷನ್ ಇದು ಸೆಂಟ್ರಲ್ ರೆಗ್ಯುಲೇಟರಿ ಕಮೀಷನ್ ಎನ್ನುವುದು ಇದೆ. But they have given powers to the state governments to have their own regulatory commission. ಏಕೆಂದರೆ ಒಂದೊಂದು ರಾಜ್ಯದಲ್ಲಿ ವಿದ್ಯುಚ್ಛಕ್ತಿ ಸರ್‌ಪ್ಲಸ್ ಇರಬಹುದು. ಈಗ ನಮ್ಮ ರಾಷ್ಟ್ರಕ್ಕೆ ವಿದ್ಯುಚ್ಛಕ್ತಿ ಕೊರತೆ ಇದೆ, ನಮ್ಮ ರಾಜ್ಯಕ್ಕೆ 1,40,000 ಮೆ.ವ್ಯಾ. ವಿದ್ಯುಚ್ಛಕ್ತಿ ಬೇಡಿಕೆ ಇದೆ. ಆದರೆ ನಾವು ಇನ್ನೂ ಕೂಡ 1,00,000, ಮೆ.ವ್ಯಾ.ಗೆ ತಲುಪಿಲ್ಲ. ಸುಮಾರು 90ರಿಂದ 95 ಸಾವಿರ ಮೆ. ವ್ಯಾ. ವರೆಗೆ ತಲುಪಿಸಿದ್ದೇವೆ. Overall situation in the country and also systematic running of this electricity, ಅದಕ್ಕೆ ಇಂಥ ಕಮೀಷನ್ ಬೇಕು. ಆ ಕಮೀಷನ್ ಇದ್ದರೆ ಈ ತರಹ ಸಾಲ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ ಎನ್ನುವುದರ ಮೇಲೆ ಸಾಕಷ್ಟು ಚರ್ಚೆ ಆದಮೇಲೆ ವಿಧಾನಪರಿಷತ್ತಿನಲ್ಲಿ ಎಲ್ಲರೂ ಇದನ್ನು ಒಪ್ಪಿದ್ದಾರೆ. ಎಲ್ಲಾ ಪಕ್ಷದವರು ಒಪ್ಪಿದ್ದಾರೆ. ಆದರೆ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಕೆ.ಇ.ಬಿ. ಪ್ರೈವಟೈಸ್ ಆದರೆ "ಸರ್ಕಾರ ವಿದ್ಯುತ್ತನ್ನು ದುರ್ಬಲವರ್ಗದವರಿಗೆ ಸರ್ಕಾರ ಆದರೆ ಫ್ರೀ ಆಗಿ ಕೊಡುತ್ತದೆ. ನಾವು ಏಕೆ ಅವರಿಗೆ ಫ್ರೀ ಆಗಿ ಪವರ್ ಕೊಡಬೇಕು" ಎನ್ನುವಂಥ ಪ್ರಸಂಗ ಬಂದಾಗ ಸರ್ಕಾರ ಆ ಹಣವನ್ನು ತುಂಬಿ ಮಾಡುವಂತೆ ಅವರಿಗೆ ಒತ್ತಾಯ ಮಾಡುತ್ತದೆ. That is the only way. ಆದ್ದರಿಂದ ಈ ಕಮೀಷನ್ನನ್ನು ಮತ್ತು ಈ ಸಾಲ ಪಡೆಯುವುದಕ್ಕೆ ಸದನದ ಅನುಮತಿ ಅವಶ್ಯಕವೆಂದು ಮೇಲ್ಮನೆಯಲ್ಲಿ ಎಲ್ಲಾ ಪಕ್ಷದವರು ಸದರಿ ಬಿಲ್‌ನ್ನು ಬೆಂಬಲಿಸಿದ್ದಾರೆ, ಇಲ್ಲಿಯೂ ಕೂಡ ಅದೇ ರೀತಿಯಾಗಿ ನಿರ್ಣಯವನ್ನು ಪಾಸ್ ಮಾಡಿಕೊಡಬೇಕೆಂದು ಸದನವನ್ನು ಕೇಳಿಕೊಳ್ಳುತ್ತೇನೆ.

ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಸಾಲ ಮಾಡುವುದರಲ್ಲಂತೂ ಮಾನ್ಯ ಮುಖ್ಯಮಂತ್ರಿಗಳು ನಿಸ್ಸೀಮರಾಗಿದ್ದಾರೆ. ಸಾಲ ಮಾಡಿ ನಾನು ಬೇಡ ಎಂದು ಹೇಳುವುದಿಲ್ಲ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಒಪ್ಪಿದ ಹಾಗೆ ವೆಲ್‌ಫೇರ್ ಮೆಶರ್ಸ್ ವಿಚಾರದಲ್ಲಿ ಅಬ್ಲಿಗೇಷನ್ಸ್ ಏನು ಇರುತ್ತವೆ ಅದನ್ನು ಮಾಡುವಂಥ ಸಂದರ್ಭದಲ್ಲಿ ಇವರು ಅಂದರೆ ಖಾಸಗಿಯವರು ಅಡ್ಡ ಬರುತ್ತಾರೆ. ದುರ್ಬಲವರ್ಗದವರಿಗೆ ಎಲ್ಲಾ ಸಬ್ಸಿಡೈಸ್ ಮಾಡಿ ಬಜೆಟರಿ ಪ್ರಾವಿಜನ್ ಇಟ್ಟು ಸಹ ಮಾಡಬೇಕಾಗುತ್ತದೆ. ಇನ್ನು ಖಾಸಗೀಕರಣ ಮಾಡಿದ ಮೇಲೆ ಅವರು ತಮ್ಮದೇ ಆದಂಥ ಟ್ಯಾರಿಫ್ ಇಟ್ಟು ಲಾಭ ತೆಗೆದುಕೊಂಡು ಅದನ್ನು ಪುನಃ ರೀಇನ್‌ವೆಸ್ಟ್ ಅಂತೂ ಕೆ.ಇ.ಬಿ.ಗೆ ಅವರು ಮಾಡುವುದಿಲ್ಲ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೆ, ರೀಇನ್‌ವೆಸ್ಟ್ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರಲ್ಲವೇ, ಅಲ್ಲಿಯೇ ಒಂದು ಪ್ರಾವಿಜನ್ ಇದೆ. ಅವನು ಏನಾದರೂ ಅವನ ಮನಸ್ಸಿಗೆ ಬಂದ ಹಾಗೆ ಟ್ಯಾರಿಫ್ ಫಿಕ್ಸ್ ಮಾಡಿದನೆಂದರೆ ಆಗ Commission can withdraw the licence.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"1948ನೇ ಸಾಲಿನ ವಿದ್ಯುಚ್ಛಕ್ತಿ ಅಧಿನಿಯಮದ 65ನೇ ಪ್ರಕರಣದ (3)ನೇ ಉಪ ಪ್ರಕರಣದ ಮೇರೆಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ವಿವಿಧ ಹಣಕಾಸು ಸಂಸ್ಥೆಗಳಿಂದ ಸಾಲದ ರೂಪದಲ್ಲಿ ಪಡೆಯಲೆಂದು ನಿಗಧಿಗೊಳಿಸಿರುವ ಮೊತ್ತ 1,750 ಕೋಟಿ ರೂಪಾಯಿಗಳಿಂದ 2,100 ಕೋಟಿ ರೂಪಾಯಿಗಳಿಗೆ ಹೆಚ್ಚು ಮಾಡಬೇಕೆಂದು ನಿರ್ಣಯವನ್ನು ಈ ಸಭೆಯ ಅಂಗೀಕರಿಸುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ ಮತ್ತು ನಿರ್ಣಯಕ್ಕೆ ಅನುಮೋದನೆ ನೀಡಲಾಯಿತು.

ಅಭಿನಂದನಾ ನಿರ್ಣಯ

ಅಧ್ಯಕ್ಷರು : ಶತಾಯುಷಿ ಶ್ರೀ ಎ.ಎಸ್.ಮೂರ್ತಿರಾಯರಿಗೆ ಅಭಿನಂದನೆಯನ್ನು ಸಲ್ಲಿಸಲು ಸಂತೋಷಿಸುತ್ತೇನೆ. ಮಂಡ್ಯ ಜಿಲ್ಲೆಯ ಅಕ್ಕಿಹೆಬ್ಬಾಳು ನರಸಿಂಹಮೂರ್ತಿರಾಯರು ಜೂನ್ 1900ರಂದು ಜನಿಸಿದರು. ಇವರು ಮಾಧ್ಯಮಿಕ ವಿದ್ಯಾಭ್ಯಾಸ ಸ್ವಂತ ಊರಿನಲ್ಲಿ ಮಾಡಿದ ಮೂರ್ತಿರಾಯರು ಮುಂದಿನ ಓದಿಗಾಗಿ ಮೈಸೂರಿಗೆ ಹೋದರು. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಇಂಗ್ಲೀಷ್‌ನಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು. ನಂತರ ಇವರು ಕಾಲೇಜಿನಲ್ಲಿ ಅಧ್ಯಾಪಕರಾಗಿ, ಸೂಪರಿಂಟೆಂಡೆಂಟ್ ಆಗಿ ಆಕಾಶವಾಣಿಯ ಅಧಿಕಾರಿಯಾಗಿ, ಕನ್ನಡ ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿ, ಕನ್ನಡ ಸಾಹಿತ್ಯಪರಿಷತ್ತಿನ ಕಾರ್ಯದರ್ಶಿಯಾಗಿ ಹೀಗೆ ವಿವಿಧ ರಂಗಗಳಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಜೊತೆ ಅವಿನಾಭಾವ ಸಂಬಂಧವನ್ನು ರೂಢಿಸಿಕೊಂಡು ಕನ್ನಡಕ್ಕಾಗಿ ದುಡಿದ ಧೀಮಂತರು. ಕಳೆದ ಜೂನ್ ತಿಂಗಳಿನಲ್ಲಿ 100ನೆಯ ವಸಂತದಲ್ಲಿ ಕಾಲಿರಿಸಿದ ಮೂರ್ತಿ ರಾಯರಿಗೆ ಕನ್ನಡ ಹಿರಿಯ ಸಾಹಿತಿ ಮಾಸ್ತಿಯವರ ಹೆಸರಿನಲ್ಲಿರುವ ಮಾಸ್ತಿ ಪ್ರಶಸ್ತಿಯನ್ನು ಪ್ರಧಾನ ಮಾಡಿರುವುದು ಉಳಿದೆಲ್ಲಾ ಪ್ರಶಸ್ತಿಗಳಿಗಿಂತ ಹೆಚ್ಚು ಮಹತ್ವಪೂರ್ಣವಾದುದು. ಕೇಂದ್ರಸಾಹಿತ್ಯ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಪ್ರಶಸ್ತಿ, ಮತ್ತು ಪಂಪ ಪ್ರಶಸ್ತಿಗಳು ಇವರಿಗೆ ಈಗಾಗಲೇ ಲಭ್ಯವಾಗಿದೆ. ಮೂರ್ತಿರಾಯರು ಲಲಿತಾ ಪ್ರಬಂಧ, ವಿಮರ್ಶೆ, ಪ್ರವಾಸ ಸಾಹಿತ್ಯಗಳಲ್ಲಿ ಎಷ್ಟೋ ಸತ್ವಶಾಲಿ ಕೃತಿಗಳನ್ನು ರೂಪಾಂತರ ಮತ್ತು ಭಾಷಾಂತರಗಳಲ್ಲೂ ನೀಡಿದ್ದಾರೆ. ಇವರು ಕನ್ನಡ ಗದ್ಯಕ್ಕೆ ಕಾವ್ಯದ ಲಾಲಿತ್ಯವನ್ನು ವೈಜಾರಿಕತೆಯ ಗಟ್ಟಿತನವನ್ನು ತಂದುಕೊಟ್ಟ ಅಪ್ರತಿಮ ಲೇಖಕರು. ಡಾ. ಕೆ. ಶಿವರಾಮಕಾರಂತರ "ಮರಳಿ ಮಣ್ಣಿಗೆ" ಕಾದಂಬರಿಯನ್ನು ಮೂರ್ತಿರಾಯರು ಇಂಗ್ಲೀಷಿಗೆ ಅನುವಾದಿಸಿದ್ದಾರೆ ಮೊಲಿಯರ್ ತಾತ್ವಿಕ ನಾಟಕದ ಕನ್ನಡ ರೂಪಾಂತರವಾದ "ಅಷಾಢಭೂತಿ" ಮೂರ್ತಿರಾಯರನ್ನು ಬೆಳಗಾಗುವುದರಲ್ಲಿ ಜನಪ್ರಿಯರನ್ನಾಗಿಸಿದ ಕೃತಿ. ಈ ಸಭೆಯು ಅಂಗೀಕರಿಸಿದ ಅಭಿನಂದನಾ ನಿರ್ಣಯದ ಪ್ರತಿಯನ್ನು ಶ್ರೀ ಎ.ಎಸ್. ಮೂರ್ತಿರಾಯರಿಗೆ ಕಳುಹಿಸಿಕೊಡಲಾಗುವುದು. ಈಗ ಗ್ರೂಪ್ ಫೋಟೋ ತೆಗೆಸುವಂಥ ಕಾರ್ಯಕ್ರಮವನ್ನು ನಾಳೆ ಇಟ್ಟುಕೊಂಡಿದ್ದೆವು. ಆದರೆ, ಇವತ್ತೆ ಸದನದ ಕಾರ್ಯಕಲಾಪಗಳ ಕೊನೆಯ ದಿವಸವಾಗಿರುವುದರಿಂದ, ಇವತ್ತು 3-30ಗಂಟೆಗೆ ಗ್ರೂಪ್ ಫೋಟೋ ತೆಗೆಸುವಂಥ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ. ಈಗ ಸಭೆಯನ್ನು ಊಟಕ್ಕೆ ಅಡ್ಜರ್ನ್ ಮಾಡುತ್ತೇನೆ. ಮಾನ್ಯ ಎಲ್ಲಾ ಸದಸ್ಯರಲ್ಲಿ